M.V.C.No.373/ 2017 PW - 1

ದಿನಾಂಕ 10.02.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : ಆರ್ 2 ಪರ ವಕೀಲರಿಂದ :</u>

ನನಗೆ ಈಗ 55 ವರ್ಷ ವಯಸ್ಸಾಗಿದೆ. ನಾನು ಹಿರಿಯ ನಾಗರೀಕರ ಪಿಂಚಣಿಯನ್ನು ಪಡೆಯುತ್ತಿದ್ದೇನೆ. ನಾನು ರೇಷನ್ ಕಾರ್ಡ್ ನಲ್ಲಿ ರೇಷನ್ ಪಡೆದುಕೊಳ್ಳುತ್ತೇನೆ. ನಾನು ಹಸಿರು ಕಾರ್ಡ್ ಅನ್ನು ಹೊಂದಿರುತ್ತೇನೆ. ನನಗೆ 65 ವರ್ಷ ಮೇಲ್ಪಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ರೇಷನ್ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ನಾನು ಗಾರೆ ಕೆಲಸ ಮಾಡಿ ತಿಂಗಳಿಗೆ 10 ಸಾವಿರ ಸಂಪಾದನೆ ಮಾಡುತ್ತಿದ್ದೆ. ಅಪಘಾತ ಹೇಗೆ ಆಯಿತು ಎಂದು ನಾನು ತಿಳಿದುಕೊಂಡಿರುತ್ತೇನೆ. ನಾನು ರಸ್ತೆಯನ್ನು ದಾಟುತ್ತಿದ್ದೆ, ಆಗ ಬೆಂಗಳೂರು ಕಡೆಯಿಂದ ಬಂದ ವಾಹನ ನನಗೆ ಡಿಕ್ಕಿ ಪಡಿಸಿರುತ್ತದೆ. ಸದರಿ ಬೈಕಿನ ನೊಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ವಿದ್ಯಾವಂತಳಲ್ಲ. ಈಗೇ4 ವರ್ಷದ ಹಿಂದೆ ಅಪಘಾತವಾಗಿರುತ್ತದೆ. ದೂರನ್ನು ನನ್ನ ತಂಗಿಯ ಮಗ ಶಂಕರ್ ಎನ್ನುವವರು ನೀಡಿರುತ್ತಾರೆ. ನಾನು ಪೋಲಿಸರ ಮುಂದೆ ಅಪಘಾತಕ್ಕೆ ಸಂಬಂದಪಟ್ಟದಂತೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಅಪಘಾತದಿಂದ ನನ್ನ ಬಲಗೈಗೆ ಮೂಳೆ ಮುರಿತವಾಗಿರುತ್ತದೆ. ಅಪಘಾತದಿಂದ ನಾನು ಕಿಮ್ಸ್

ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದೆ. ಕಿಮ್ಸ್ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಸದರಿ ಅಪಘಾತದಿಂದ ಚಿಕಿತ್ಸೆಗಾಗಿ 2 ಲಕ್ಷ ರೂಪಾಯಿ ಖರ್ಚಾಗಿಲ್ಲ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 10 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿದ್ದೆ ಎನ್ನುವ ಬಗ್ಗೆ ಯಾವುದೇ ದಾಖಲೆ ನೀಡಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಗ ನನಗೆ ವ್ಯವಸಾಯ ಮಾಡಲು ಆಗುವುದಿಲ್ಲ, ಈಗ ಮನೆಕೆಲಸ ಮಾಡಲು ಕಷ್ಟವಾಗುತ್ತಿದೆ. ನಾನು ನನ್ನ ಬೇಜಾವಬ್ದಾರಿತನದಿಂದ ಬೆಂಗಳೂರಿನ ಕಡೆಯಿಂದ ಬರುವ ವಾಹನವನ್ನು ಗಮನಿಸದೆ ಅಪಘಾತಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸದರಿ ಅಪಘಾತದಿಂದ ಹೆಚ್ಚಿನ ಗಾಯವಾಗಿಲ್ಲ ಆದರೆ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವೈದ್ಯಕೀಯ ದಾಖಲಾತಿಗಳನ್ನು ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆಸ ರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಚನ್ನಪಟ್ಟಣ